INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -5, September--October, 2024,
PageNo,72-77
Peer -Reviewed, Refereed Journal

# ಹೊಸಂತೆ ಕಮಲೇಶ್ವರ ದೇವಾಲಯದ ಅವರಣದಲ್ಲಿರುವ ಕೊಳಗಳು ಮತ್ತು ನೀರಾವರಿ ವ್ಯವಸ್ಥೆ

**ಡಾ.ಮಲ್ಲೇಶ.ಎಂ.**[1]

ನಮ್ಮ ಮಲೆನಾಡಿನ ಪಶ್ಚಿಮ ಘಟ್ಟಗಳಲ್ಲಿ ಇರುವ ಅಸಂಖ್ಯಾತ ನೀರಿನ ಮೂಲಗಳು ಕರ್ನಾಟಕ ರಾಜ್ಯಕ್ಕೆ ಒಂದು ಬಹುದೊಡ್ಡ ಕೊಡುಗೆ. ಏಕೆಂದರೆ ಹೆಚ್ಚು ನದಿ, ಹಳ್ಳ, ಹೊಳೆ, ತೊರೆಗಳು ಹುಟ್ಟುವುದು ಇಲ್ಲಿಯ ಗುಡ್ಡ ಮತ್ತು ಬೆಟ್ಟಗಳಲ್ಲಿ. ಹೊಸಂತೆಯು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿದೆ. ಶಿವಮೊಗ್ಗದಿಂದ ಸಾಗರದ ಮುಖ್ಯರಸ್ತೆಯ ಮಾರ್ಗವಾಗಿ ಚಲಿಸಿದರೆ ಅನಂದಪುರದಿಂದ ೧೦ ಕಿ.ಮಿ ಮುಂದೆ ಸಾಗಿದರೆ ಕಾಸ್ಪಾಡಿ ಎಂಬ ಗ್ರಾಮ ಸಿಗುತ್ತದೆ. ಅಲ್ಲಿ ಬಲಕ್ಕೆ ತಾಗರ್ತಿ ಮಾರ್ಗದ ರಸ್ತೆಯಲ್ಲಿ ೬ ಕಿ.ಮಿ ಸಾಗಿದರೇ ಚಿಕ್ಕಬಿಲಗುಂಜಿ ಗ್ರಾಮವಿದೆ. ಈ ಗ್ರಾಮದ ದ್ವಾರದಲ್ಲಿ ಎಡಗಡೆ ಮಾರ್ಗವಾಗಿ ೫೦೦ ಮೀಟರ್ ಸಾಗಿದರೇ ನಮಗೆ ಈ ಹೊಸಂತೆ ದೇವಾಲಯವು ಸಿಗುತ್ತದೆ.

## ದೇವಾಲಯದ ಬಗ್ಗೆ

ಪ್ರಾಚೀನ ಕಾಲದಿಂದಲೂ ಶಿವಮೊಗ್ಗ ಸಾಮರಸ್ಯಕ್ಕೆ, ಹಾಗೂ ಧಾರ್ಮಿಕ ಸಹಿಷ್ಣುತೆಗೆ ಪ್ರಸಿದ್ಧವಾಗಿದೆ. ಹಲವು ಧರ್ಮಗಳ ನೆಲೆವೀಡಾಗಿ ತನ್ನದೇ ಆದ ಚಾರಿತ್ರಿಕ ಸಂಸ್ಕೃತಿ ಪರಂಪರೆಗಳನ್ನು ಪಡೆದಿದೆ. ಶಿವಮೊಗ್ಗ ಜಿಲ್ಲೆಯಲ್ಲಿನ ಧಾರ್ಮಿಕ ಜೀವನವನ್ನು ಗಮನಿಸಿದಾಗ ಹಲವಾರು ಧರ್ಮಗಳು ಬೆಳೆದಿವೆ. ಇಲ್ಲಿನ ಜನತೆಯ ಧಾರ್ಮಿಕ ಶ್ರದ್ದೆ ಸಮನ್ವಯತೆ ಪ್ರಾಚೀನ ಕಾಲದಿಂದಲೂ ಧಾರ್ಮಿಕ ನಂಬಿಕೆಗಳನ್ನು ಹಾಗೂ ಧರ್ಮಗಳನ್ನು ಆಕರ್ಷಿಸಿದೆ. ಈ ದೇವಾಲಯದ ರಚನೆ ಕಂಬಗಳ ವಿನ್ಯಾಸ ನೋಡಿದರೇ ಈ ದೇವಾಲಯವು ಕೆಳದಿ ಅರಸರ ಕಾಲಕ್ಕಿಂತ ಪೂರ್ವದ ದೇವಾಲಯವೆಂದು ಹೇಳಬಹುದು. ಕಂಬಗಳ ರಚನೆಯ ಆಧಾರದ ಮೇಲೆ ಮತ್ತು ಇತಿಹಾಸ ತಜ್ಞರ ಅಭಿಪ್ರಾಯದ ಪ್ರಕಾರ ಈ ದೇವಾಲಯ ರಾಷ್ಟ್ರಕೂಟರ ಕಾಲದ ದೇವಾಲಯದ ಎಂದು ಹೇಳಬಹುದು. ಈ ದೇವಾಲಯವು ಗರ್ಭಗೃಹ ಸುಖನಾಸಿ ಮುಖಮಂಟಪವನ್ನು ಹೊಂದಿದೆ. ಮುಖಮಂಟಪದಲ್ಲಿ ಶಿವಲಿಂಗಕ್ಕೆ

[1] .**ಅತಿಥಿ ಉಪನ್ಯಾಸಕರು,ಇತಿಹಾಸ ವಿಭಾಗ, ವಿಶ್ವವಿದ್ಯಾಲಯ ಶ್ರೀಮದ್‌ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.**

ಅಭಿಮುಖವಾಗಿ ನಂದಿ ವಿಗ್ರಹವಿದೆ. ಗರ್ಭಗುಡಿಯ ಶಿವಲಿಂಗದ ಮೇಲೆ ಮೇಲ್ಛಾವಣಿಯಿಂದ ಇಳಿಬಿಟ್ಟಿರುವ ಕಳಸ ಮತ್ತು ಡಮರು ಇದೆ.

ದೇವಾಲಯದ ಶಿವಲಿಂಗದ ಬಲಭಾಗದಲ್ಲಿ ಗಣೇಶ ವಿಗ್ರಹ ಎಡಗಡೆ ವೀರಭದ್ರ ವಿಗ್ರಹಗಳಿವೆ. ಈ ದೇವಾಲಯದ ಮುಖಮಂಟಪಕ್ಕೆ ೩ ದ್ವಾರಗಳಿವೆ. ಈ ದೇವಾಲಯದಲ್ಲಿ ೫ ನಾಗವಿಗ್ರಹಗಳಿವೆ ಗರ್ಭಗುಡಿಯ ಮೇಲೆ ಹಳೇಯ ಗೋಪುರವು ಹಾಳಾಗಿದ್ದು ಹೊಸ ಗೋಪುರವನ್ನು ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ ೨೦ ಕಂಬಗಳನ್ನು ಕಾಣಬಹುದು. ಅಲ್ಲದೆ ಈ ದೇವಾಲಯದ ಬಲಭಾಗದಲ್ಲಿ ೨ ಅಪ್ರಕಟಿತ ಶಾಸನಗಳು ಹಾಳಾಗಿ ಬಿದ್ದಿವೆ. ಗರ್ಭಗೃಹದಲ್ಲಿರುವ ಶಿವಲಿಂಗವನ್ನು ಶ್ರೀಧರ ಸ್ವಾಮಿಗಳ ಗುರುಗಳು ಶಿವಾನಂದ ಸರಸ್ವತಿ ಸ್ವಾಮಿಗಳು ಪ್ರತಿಷ್ಠಾಪನೆ ಮಾಡಿದಂತಹ ಲಿಂಗವಾಗಿದೆ. ಈ ಶಿವಲಿಂಗ ಬೆಳ್ಳಿಯಾದ್ದಾಗಿದೆ. ಇದನ್ನು ಸ್ಥಳೀಯವಾಗಿ ಬಾಣಲಿಂಗ ಎಂದು ಕರೆಯಲಾಗುತ್ತದೆ. ಶ್ರೀಧರ ಸ್ವಾಮಿಗಳು, ಶಿವಾನಂದ ಸರಸ್ವತಿ ಸ್ವಾಮಿಗಳು ಇವರ ಗುರುಗಳಾದ ಪರಮಾನಂದ ಸರಸ್ವತಿ, ಈ ಮೂರು ಸ್ವಾಮಿಗಳು ತಪಸ್ಸುಮಾಡಿದಂತಹ ಸ್ಥಳ ಇದಾಗಿದೆ.

ಈ ಗರ್ಭಗೃಹದಲ್ಲಿರುವ ಈ ಲಿಂಗದ ವಿಶೇಷತೆ ಎಂದರೇ ಲಿಂಗದ ನೇರ ಕೆಳಭಾಗದಲ್ಲಿ ಗಂಗೆಯು ಉದ್ಭವವಾಗುತ್ತದೆ. ಉದ್ಭವವಾಗುವಂತಹ ನೀರು ಕಾಶಿಯಲ್ಲಿರುವ ಗಂಗಾನದಿಯ ನೀರು ಈವೆರಡು ಒಂದೇ ಎಂದು ಪ್ರತೀತಿ ಇದೆ. ಇಲ್ಲಿ ಉದ್ಭವವಾಗುವ ನೀರು ಕಾಶಿಯಲ್ಲಿರುವ ಪವಿತ್ರಗಂಗಾ ನದಿಯ ನೀರಿನಂತೆ ಕುಡಿಯಲು ಒಂದೇ ರೀತಿಯ ರುಚಿಯನ್ನು ಹೊಂದಿವೆ. ಇಲ್ಲಿ ಉದ್ಭವವಾಗುವ ನೀರನ್ನು ಪ್ರಸ್ತುತ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕುಡಿದಾಗ ನಾವು ದಿನನಿತ್ಯ ಕುಡಿಯುವ ನೀರಿಗಿಂತ ರುಚಿಕರವಾಗಿದೆ. ಈ ನೀರನಲ್ಲಿ ಔಷದಿಯುಕ್ತ ಗುಣಗಳನ್ನು ಕಾಣಬಹುದು. ಹೇಗೆ ಗಂಗಾಜಲವನ್ನು ಕುಡಿದರೇ ರೋಗರುಜಿನೆಗಳು ಕ್ರಮೇಣ ಮಯಾವಾಗುತ್ತವೆಯೋ ಹಾಗೇ ಈ ನೀರನ್ನು ಕುಡಿದರೇ ಮನುಷ್ಯನ ರೋಗರುಜಿನೆಗಳು ಮಯಾವಾಗುತ್ತದೆ ಎಂಬ ಪ್ರತೀತಿ ಇದೆ.

ಇಲ್ಲಿ ಉದ್ಭವವಾಗುವ ನೀರನ್ನು ತೀರ್ಥ ಎಂದು ಕರೆಯಲಾಗುತ್ತದೆ. ಈ ತೀರ್ಥ ಅಥವಾ ನೀರಿಗೆ ಇರುವ ವಿಶೇಷ ಶಕ್ತಿ ಎಂದರೇ ಪ್ರಾಣ ಶಕ್ತಿ ಜಾಸ್ತಿ ಇದೆ. ಮನುಷ್ಯನಲ್ಲಿ ರೋಗವು ಉತ್ಪತ್ತಿಯಾಗುವುದು ಪ್ರಾಣ ಶಕ್ತಿಯ ವ್ಯತ್ಯಾಸದಿಂದ ಈ ಪ್ರಾಣ ಶಕ್ತಿಯ ವ್ಯತ್ಯಾಸವನ್ನು ಸರಿ ಮಾಡಿ ಪ್ರಾಣ ಶಕ್ತಿಗೆ ಬಲವನ್ನು ನೀಡಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವಂತಹ ಗುಣವು ಈ ನೀರಿನಲ್ಲಿದೆ. ಇಲ್ಲಿರುವ ಲಿಂಗದ ಮತ್ತೊಂದು ವಿಶೇಷತೆ ಎಂದರೆ ಶಿವಲಿಂಗದ ಮೇಲೆ ಅಡ್ಡಗೆರೆಗಳನ್ನು ಹೊಂದಿದೆ. ಇದಕ್ಕೆ ಕಾಮಾಕ್ಯ ಲಿಂಗ ಎಂದು ಕರೆಯಲಾಗುತ್ತದೆ. ಗೆರೆಗಳಿಲ್ಲದೆ ಇರುವ ಸಾಮಾನ್ಯವಾಗಿ ಕಂಡುಬರುವ ಲಿಂಗಗಳು ಮೋಕ್ಷರ್ಥಿಗಳಿಗೆ ವೈರಾಗ್ಯವನ್ನು ಹೊಂದಿರುವವರಿಗೆ ಪೂಜೆಗೆ ಯೋಗ್ಯವಾದಂತಹ ಲಿಂಗವಾಗಿರುತ್ತವೆ.

**ಕೊಳಗಳು**

ಹೊಸಂತೆಯಲ್ಲಿ ಒಟ್ಟು ೬ ಕೊಳಗಳಿದ್ದು ಅವುಗಳು ಒಂದೊಂದು ವಿಭಿನ್ನ ರೀತಿಯಲ್ಲಿವೆ. ಈ ಕೊಳಗಳು ಕಮೇಲೇಶ್ವರ ದೇವಾಲಯದ ಅವರಣದ ಭಾಗದಲ್ಲಿ ಕಂಡಬರುತ್ತವೆ. ಅಲ್ಲದೇ ಇವುಗಳು ದೇವಾಲಯಕ್ಕೆ ಹೊಂದಿಕೊಂಡಂತೆ ಇವೆ. ಈ ಕೊಳಗಳ ನೀರು ಒಂದಕ್ಕೊಂದು ಸಂಬಂದ ಹೊಂದಿದಂತೆ ಅಂತರಮುಖವಾಗಿ ನೀರು ಸರಬರಾಜು ಆಗುತ್ತದೆ. ಮೊದಲನೇ ಕೊಳದಿಂದ ಕೊನೆಯ ಕೊಳದವರೆಗೆ ನೀರು ಭೂಮಿಯ ಒಳಗೆ ಅಂತರಾಳದಲ್ಲಿ ಪ್ರತಿಯೊಂದು ಕೊಳಕ್ಕೆ ಹರಿಯುತ್ತದೆ. ಅಂದರೆ ಪ್ರತಿಯೊಂದು ಕೊಳಕ್ಕು ಒಂದಕ್ಕೊಂದು ಸರಪಳಿ ಕೊಂಡಿ ರೀತಿಯಲ್ಲಿ ಅಂಟಿಕೊಡಿವೆ.

**ಒಂದನೇಯ ಕೊಳ**

**ಸ್ಥಳ–ಕಮಲೇಶ್ವರ ದೇವಾಲಯದ ಎಡಬಾಗ** **ಸಂರಕ್ಷಣೆ – ಇದೆ**

**ವಿಸ್ತೀರ್ಣ–ಉದ್ದ ೯ ಅಗಲ ೬ ಅಡಿ ೧೦ ಇಂಚು** **ಸ್ಥಿತಿ– ಮಧ್ಯಮ**

**ಉಪಯೋಗ– ಕುಡಿಯಲು, ಪೂಜೆಗೆ**

ಕಮಲೇಶ್ವರ ದೇವಾಲಯದ ಎಡಭಾಗದಲ್ಲಿ ದೇವಾಲಯದ ಹಿಂದೆ ಸಾಗಿದಾಗ ನಮಗೆ ಈ ಕೊಳ ಕಾಣಸಿಗುತ್ತದೆ. ಈ ಕೊಳಕ್ಕೆ ನೀರು ದೇವಾಲಯದ ಗರ್ಭಗೃಹದಲ್ಲಿರುವ ಶಿವಲಿಂಗದ ಕೆಳಗೆ ಉದ್ಭವವಾಗುವ ಅಂತರ್‌ಜಲದಿಂದ ಅಂತರ್ ಮುಖವಾಗಿ ಹರಿದು ಈ ಕೊಳಕ್ಕೆ ಬಂದು ಸೇರುತ್ತದೆ. ಈ ಕೊಳವು ನೋಡಲು ತುಂಬಾ ಚಿಕ್ಕದಾಗಿದ್ದು. ಒಂದು ಚಿಕ್ಕ ಕೋಣೆಯಾಕಾರ ದಲ್ಲಿದೆ. ಇದಕ್ಕೆ ಒಂದು ಚಿಕ್ಕ ಬಾಗಿಲು ಇದ್ದು ಇದು ೩ ಅಡಿ ೯ ಇಂಚು ಅಗಲ ೫ ಅಡಿ ಉದ್ದವಿದೆ. ಇದಕ್ಕೆ ಇಳಿಯಲು ಸಣ್ಣ ೪ ಮೆಟ್ಟಿಲುಗಳಿವೆ. ಈ ಕೊಳದಿಂದ ನೀರು ಮುಂದಿನ ಕೊಳಕ್ಕೆ ಅಂತರ್‌ಮುಖವಾಗಿ ಸಾಗುತ್ತದೆ.

**ಎರಡನೇ ಕೊಳ**

**ಸ್ಥಳ–ಕಮಲೇಶ್ವರ ದೇವಾಲಯದ ಎಡಬಾಗ** **ಸಂರಕ್ಷಣೆ – ಇದೆ**

**ವಿಸ್ತೀರ್ಣ–ಉದ್ದ ೧೬ ಅಡಿ, ಅಗಲ ೧೬ ಅಡಿ** **ಸ್ಥಿತಿ– ಮಧ್ಯಮ**

**ಉಪಯೋಗ– ಕುಡಿಯಲು, ಪೂಜೆಗೆ**

ಮೊದಲನೇ ಕೊಳದಿಂದ ಈ ಕೊಳವು ೧೫ ಅಡಿ ಅಂತರದಲ್ಲಿದೆ. ಈ ಕೊಳಕ್ಕೆ ಅಂತರ್‌ಮುಖವಾಗಿ ೩ ಇಂಚಿನ ಕೊಳವೆ ಮೂಲಕ ಬಂದಂತಹ ನೀರು ೧೫ ಅಡಿ ಎತ್ತರದಲ್ಲಿ ಹೆಂಚಿನ ಹೊದಿಕೆಯಿರುವ ಕೋಣೆಯಲ್ಲಿ ಬಂದು ಸಂಗ್ರಹವಾಗುತ್ತದೆ. ಈ ಕೋಣೆಯು ೧೬ ಅಡಿ ಉದ್ದ ೧೬ ಅಡಿ ಅಗಲದಲ್ಲಿದೆ. ಇಲ್ಲಿರುವ ನಂದಿಯು ಉದ್ದ ೧ ಅಡಿ ೭ ಇಂಚು, ಎತ್ತರ ೧ ಅಡಿ ೯ ಇಂಚು ಇದೆ. ಇದು ಲಿಂಗಕ್ಕೆ ಅಭಿಮುಖವಾಗಿದೆ. ಇಲ್ಲಿ ಮುಖ್ಯವಾಗಿ ೪ ಅಡಿ ಎತ್ತರ ಲಿಂಗವಿದೆ. ಇಲಿರುವ ಆ

ಲಿಂಗದ ತಳಭಾಗಕ್ಕೆ ನೀರು ಬಂದು ಸಂಗ್ರಹವಾಗುತ್ತದೆ. ಇದಕ್ಕೆ ೩ ಇಂಚಿನ ಕೊಳವೆ ಇದೆ. ಇಲ್ಲಿಂದ ಮುಂದೆ ನೀರು ಕೊಳವೆ ಮುಖಾಂತರ ಮುಂದಿನ ಕೊಳಕ್ಕೆ ಸಾಗುತ್ತದೆ.

**ಮೂರನೇ ಕೊಳ**

**ಸ್ಥಳ–ಕಮಲೇಶ್ವರ ದೇವಾಲಯದ ಮುಂಬಾಗ ಸಂರಕ್ಷಣೆ – ಇದೆ**

**ವಿಸ್ತೀರ್ಣ–ಉದ್ದ ೪೨ ಅಡಿ, ಅಗಲ ೪೦ ಅಡಿ ಸ್ಥಿತಿ– ಮಧ್ಯಮ**

**ಉಪಯೋಗ– ಕುಡಿಯಲು, ಪೂಜೆಗೆ**

ಎರಡನೇ ಕೊಳದಿಂದ ಅಂತರ್‌ಮುಖವಾಗಿ ೩ ಇಂಚಿನ ಕೊಳವೆ ಮೂಲಕ ಬಂದಂತಹ ನೀರು ದೇವಾಲಯದ ಮುಂಭಾಗದಲ್ಲಿರುವ ದೊಡ್ಡ ಕೊಳಕ್ಕೆ ಬಂದು ಸೇರುತ್ತದೆ. ಈ ಕೊಳವು ಒಟ್ಟು ಇಲ್ಲಿರುವ ೬ ಕೊಳಗಳಲ್ಲಿ ಅತ್ಯಂತ ದೊಡ್ಡದಾದ ಕೊಳವಾಗಿದೆ. ಈ ಕೊಳದ ಉದ್ದವು ೪೨ ಅಡಿ ಇದ್ದರೆ ಅಗಲ ೪೦ ಅಡಿ ಇದೆ. ಈ ಕೊಳವನ್ನು ಸಂಪೂರ್ಣವಾಗಿ ಸ್ಥಳೀಯವಾಗಿ ಸಿಗುವ ಜಂಬಿಟ್ಟಿಗೆ ಮತ್ತು ಕಲ್ಲುಗಳನ್ನು ಉಪಯೋಗಿಸಿ ಈ ಕೊಳವನ್ನು 15 ಮೀಟರ್ ಉದ್ದ, 14 ಮೀಟರ್ ಅಗಲವಾದ ಅಳತೆಯ ವಿಸ್ತಾರವಾದ ಆವರಣದೊಳಗೆ ನಿರ್ಮಿಸಲಾಗಿದೆ. ಈ ಆವರಣಕ್ಕೆ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಇಳಿಯಲು ಮೆಟ್ಟಿಲುಗಳಿವೆ. ಇದಕ್ಕೆ ಕಲ್ಲಿನ ನೀರು ಸರಬರಾಜು ಕಾಲುವೆ ಇದ್ದು ಇಲ್ಲಿಂದ ಚೌಕಾಕಾರದ ತಳವುಳ್ಳ ನಾಲ್ಕನೇ ಕೊಳಕ್ಕೆ ನೀರು ಸರಬರಾಜಗುತ್ತದೆ. ಆವರಣದ ದಕ್ಷಿಣದ ಕೊನೆಯ ಭಾಗದಲ್ಲಿ ಕಲ್ಲುಗಳಿಂದ ನಿರ್ಮಿಸಿದ ಸ್ನಾನದ ಸ್ಥಳವಿದೆ. ದಕ್ಷಿಣದಲ್ಲಿರುವ ಮೆಟ್ಟಿಲುಗಳು ನೇರವಾಗಿ ದೇಗುಲಕ್ಕೆ ಸೇರಿಸುತ್ತದೆ.

**ನಾಲ್ಕನೇ ಕೊಳ**

**ಸ್ಥಳ–ಕಮಲೇಶ್ವರ ದೇವಾಲಯದ ಬಲಬಾಗ ಸಂರಕ್ಷಣೆ – ಇದೆ**

**ವಿಸ್ತೀರ್ಣ–ಉದ್ದ ೨೫ ಅಡಿ, ಅಗಲ ೩೬ ಅಡಿ ಸ್ಥಿತಿ– ಮಧ್ಯಮ**

**ಉಪಯೋಗ– ಕುಡಿಯಲು, ಪೂಜೆಗೆ**

ಮೂರನೇ ಕೊಳದಿಂದ ಅಂತರ್‌ಮುಖವಾಗಿ ಮೂಲಕ ಬಂದಂತಹ ನೀರು ದೇವಾಲಯದ ಮುಂಭಾಗದಲ್ಲಿರುವ ಮತ್ತೊಂದು ದೊಡ್ಡ ಕೊಳಕ್ಕೆ ಬಂದು ಸೇರುತ್ತದೆ. ಈ ಕೊಳವು ಒಟ್ಟು ಇಲ್ಲಿರುವ ೬ ಕೊಳಗಳಲ್ಲಿ ಅತ್ಯಂತ ದೊಡ್ಡದಾದ ಎರಡನೇಯ ಕೊಳವಾಗಿದೆ. ಈ ಕೊಳವನ್ನು ಸಹ ಸಂಪೂರ್ಣವಾಗಿ ಸ್ಥಳೀಯವಾಗಿ ಸಿಗುವ ಜಂಬಿಟ್ಟಿಗೆ ಮತ್ತು ಕಲ್ಲುಗಳನ್ನು ಉಪಯೋಗಿಸಿ ಈ ಕೊಳವನ್ನು 14 ಮೀಟರ್ ಉದ್ದ, 12 ಮೀಟರ್ ಅಗಲವಾದ ಅಳತೆಯ ವಿಸ್ತಾರವಾದ ಆವರಣದೊಳಗೆ ನಿರ್ಮಿಸಲಾಗಿದೆ.. ಈ ಆವರಣಕ್ಕೆ ಹತ್ತಲು ಮತ್ತು ಇಳಿಯಲು ಎಲ್ಲಾ ದಿಕ್ಕುಗಳಲ್ಲಿಯು ಮೆಟ್ಟಿಲುಗಳಿವೆ.

**ಐದನೆಯ ಕೊಳ**

**ಸ್ಥಳ–ಕಮಲೇಶ್ವರ ದೇವಾಲಯದ ಬಲಭಾಗ ಸಂರಕ್ಷಣೆ – ಇದೆ**

**ವಿಸ್ತೀರ್ಣ–ಉದ್ದ ೧೫ ಅಡಿ, ಅಗಲ ೯ ಅಡಿ ಸ್ಥಿತಿ– ಮಧ್ಯಮ**

**ಉಪಯೋಗ– ಕುಡಿಯಲು, ಪೂಜೆಗೆ**

ನಾಲ್ಕನೆಯ ಕೊಳಕ್ಕೆ ಹೊಂದಿಕೊಂಡಂತೆ ಇರುವ ಈ ಕೊಳಕ್ಕೆ ಅಂತರ್ಮುಖವಾಗಿ ೩ ಇಂಚಿನ ಕೊಳವೆ ಮೂಲಕ ಬಂದಂತಹ ನೀರು ಬಂದು ಸೇರುತ್ತದೆ. ಈ ಕೊಳಕ್ಕು ಸಹ ಹತ್ತಲು ಮತ್ತು ಇಳಿಯಲು ಮೆಟ್ಟಿಲುಗಳಿವೆ.. ಈ ಕೊಳವನ್ನು ಸಹ ಸಂಪೂರ್ಣವಾಗಿ ಸ್ಥಳೀಯವಾಗಿ ಸಿಗುವ ಜಂಬಿಟ್ಟಿಗೆ ಮತ್ತು ಕಲ್ಲುಗಳನ್ನು ಉಪಯೋಗಿಸಿ ಈ ಕೊಳವನ್ನು 8 ಮೀಟರ್ ಉದ್ದ, 6 ಮೀಟರ್ ಅಗಲವಾದ ಅಳತೆಯ ವಿಸ್ತಾರವಾದ ಆವರಣದೊಳಗೆ ನಿರ್ಮಿಸಲಾಗಿದೆ.

**ಆರನೆಯ ಕೊಳ**

**ಸ್ಥಳ–ಕಮಲೇಶ್ವರ ದೇವಾಲಯದ ಬಲಭಾಗ ಸಂರಕ್ಷಣೆ – ಇದೆ**

**ವಿಸ್ತೀರ್ಣ–ಉದ್ದ ೧೨ ಅಡಿ, ಅಗಲ ೫ ಅಡಿ ಸ್ಥಿತಿ– ಮಧ್ಯಮ**

**ಉಪಯೋಗ– ಕೃಷಿಗೇ**

ಐದನೆಯ ಕೊಳದಿಂದ ಇದು ೪೭ ಅಡಿ ಅಂತರವಿದೆ. ಹೂಸಂತೆಯ ಕಮಲೇಶ್ವರ ದೇವಾಲಯದ ಅವರಣಕ್ಕೆ ಭೇಟಿ ನೀಡಿದರೆ ನಮಗೆ ಮೊದಲು ಸಿಗುವ ಕೊಳವಾಗಿದೆ. ಐದನೆಯ ಕೊಳದಿಂದ ಅಂತರ್ಮುಖವಾಗಿ ೩ ಇಂಚಿನ ಕೊಳವೆ ಮೂಲಕ ನೀರು ಬಂದು ಸೇರುತ್ತದೆ. ಈ ಕೊಳವನ್ನು ಸಹ ಸಂಪೂರ್ಣವಾಗಿ ಸ್ಥಳೀಯವಾಗಿ ಸಿಗುವ ಜಂಬಿಟ್ಟಿಗೆ ಮತ್ತು ಕಲ್ಲುಗಳನ್ನು ಉಪಯೋಗಿಸಿ ಈ ಕೊಳವನ್ನು 4ಮೀಟರ್ ಉದ್ದ, 2 ಮೀಟರ್ ಅಗಲವಾದ ಅಳತೆಯ ವಿಸ್ತಾರವಾದ ಆವರಣದೊಳಗೆ ನಿರ್ಮಿಸಲಾಗಿದೆ.

**ನೀರಾವರಿ ವ್ಯವಸ್ಥೆ**

ಆರನೆಯ ಕೊಳವು ಹೂಸಂತೆ ಕಮಲೇಶ್ವರ ದೇವಾಲಯದ ಅವರಣದಲ್ಲಿರುವ ಕೊಳಗಳು ಮತ್ತು ನೀರಾವರಿ ವ್ಯವಸ್ಥೆಯಲ್ಲಿನ ಅತ್ಯಂತಪ್ರಮುಖವಾದ ಕೊಳವಾಗಿದೆ. ಏಕೆಂದರೆ ಈ ಕೊಳವು ನೀರಾವರಿ ವ್ಯವಸ್ಥೆಯಲ್ಲಿನ ಮುಖ್ಯ ಅಂಶವಾದ ತೂಬನ್ನು ಹೊಂದಿದೆ ಮತ್ತು ಕೆಳದಿ ಅರಸರ ನೀರಾವರಿಯ ಪ್ರಮುಖವಾದ ಲಕ್ಷಣವಾದ ನಂದಿಯನ್ನು ಹೊಂದಿದೆ.

ಕಾಲುವೆ ನೀರಾವರಿ ವ್ಯವಸ್ಥೆಯ ಮೂಲಕ ನೀರು ಹೊರಗೆ ೨ ಅಡಿ ಅಗಲದ ಕಾಲುವೆ ಮೂಲಕ ಹರಿದು ಕೃಷಿಗೆ ಬಳಸಲಾಗುತ್ತದೆ, ಸುತ್ತಲೂ ಇರುವ ರಕ್ಷಣಾ ಗೋಡೆ, ಕೊಳದ ನೆಲಹಾಸು ಎಲ್ಲವೂ ಅದ್ಭುತವಾಗಿದ್ದು ಅಂದಿನ ಕಾಲದ ತಂತ್ರಜ್ಞಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಸಂಪೂರ್ಣವಾಗಿ

ಸ್ಥಳೀಯವಾಗಿ ಸಿಗುವ ಜಂಬಿಟ್ಟಿಗೆ ಮತ್ತು ಕಲ್ಲುಗಳನ್ನು ಉಪಯೋಗಿಸಿಇದನ್ನು ನಿರ್ಮಿಸಲಾಗಿದೆ. ಅದರೆ ಈಗ ನೀರು ಹೊರ ಹೋಗುವ ತೂಬು ಮತ್ತು ಕಾಲುವೆ ಸಹ ಹಾಳಾಗಿದೆ. ಇದರ ಪಕ್ಕದಲ್ಲಿರುವ ಕೆರೆಯು ಒತ್ತುವರಿಯಿಂದ ಸಂಪೂರ್ಣ ಮುಚ್ಚಿಹೋಗುತ್ತಿದೆ.

**ಕೆರೆ**

ಕೆರೆಯು ಕೆಳದಿ ಅರಸರ ಕಾಲದ ಪ್ರಮುಖ ಕೆರೆಯಾಗಿದೆ. ಈ ಕೆರೆಯ ದಡದ ಮೇಲೆ ಕೆಳದಿ ಅರಸರಿಗೆ ಸಂಬಂಧಿಸಿದಂತಹ ಒಂದು ಶಿವಲಿಂಗ ಹಾಗೂ ವೀರಗಲ್ಲು ಕೂಡ ಇದೆ. ಈ ಕೆರೆಯು ಮಳೆಯ ಕೊಳದಿಂದ ಅಂತರ್‌ಮುಖವಾಗಿ ನೀರನ್ನು ಆಧರಿಸಿದೆ. ಈಗ ಈ ಕೆರೆಯ ಒತ್ತುವರಿಯಾಗುತ್ತಿದ್ದು ಅಳಿವಿನ ಅಂಚಿನಲ್ಲಿದೆ. ಮಲ್ಲಿಕಾರ್ಜುನ ದೇವಾಲಯವು ಈ ಕೆರೆಯ ಹತ್ತಿರವಿದೆ. **ತೂಬು** ತೂಬಿನ ಅವಶೇಷವು ದೇವಾಲಯದ ಬಲಭಾಗದಲ್ಲಿ ಬಿದ್ದಿದೆ. ನೀರಾವರಿಯಲ್ಲಿ ಕೆರೆಗಳು, ಕೊಳಗಳು, ಪುಷ್ಕರಣಿಗಳು, ಬಾವಿಗಳು ನದಿಮೂಲಗಳು, ನದಿ ಮಾತೃಕ, ದೇವಮಾತೃಕಗಳು ಅತ್ಯಂತ ಪ್ರಮುಖವಾಗಿವೆ. ನಿರ್ಮಿಸಿ ಒಂದು ದೇವಾಲಯ, ಮಠ, ಕೋಟೆಗಳು, ಅರಮನೆಗಳು ಮುಂತಾದವುಗಳ ಹತ್ತಿರ ದಿನನಿತ್ಯದ ಉಪಯೋಗಕ್ಕಾಗಿ. ಅಂದರೆ ಕುಡಿಯಲು ಸ್ನಾನಕ್ಕೆ ಇನ್ನಿತರ ಉಪಯೋಗಕ್ಕೆ ನಂತರ ಮುಖ್ಯವಾಗಿ ಕೃಷಿಗೆ ನೀರುನ್ನು ಉಪಯೋಗಿಸಲಾಗುತಿತ್ತು.

## ಗ್ರಂಥಗಳ ಪರಾಮರ್ಶನ

೧. ಅಭಿಶಂಕರ್, ಜಿಲ್ಲಾ ಗೆಜೆಟಿಯರ್. ಶಿವಮೊಗ್ಗ ಜಿಲ್ಲೆ

೨. ಗೋಪಾಲ್. ಆರ್. ೨೦೦೮ "ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ. ಮೈಸೂರು.

೩. ರೈಸ್, ಬಿ.ಎಲ್, ೧೮೯೪ "ಎಫಿಗ್ರಾಫಿಯ ಕರ್ನಾಟಿಕ" ಸಂಪುಟ–೭ ಮತ್ತು ೮, ಮೈಸೂರು ಗೌರ್‍ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು.

೪. ರಾಜರಾಮ್ ಹೆಗಡೆ, ೨೦೦೨, "ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.